

ಪ್ರಪಂಚವೆಲ್ಲ ಕುಲಗೆಟ್ಟು ಕೂತಿದೆ ಎಂದು ಮತ್ತೊಮ್ಮೆ ಅನ್ನಿಸಿತು.

ಬಿಸ್ಕೆಟ್ ಕದ್ದವರನ್ನಾದರೂ ಹಿಡಿದು ಹಾಕೋಣ ಎಂಬ ಹಟ ಹುಟ್ಟಿತು. ಹರಿಹರನಿಗೆ ಕರೆ ಹಚ್ಚಿ ಬಿಸ್ಕೆಟ್ ಕಳ್ಳನ ಕಥೆ ಏನಾಯಿತೆಂದು ವಿಚಾರಿಸಿದಳು. ಹರಿಹರನ್ ಹಿಂದಿನ ರಾತ್ರಿಯೂ ಓಲ್ಡ್ ಮಾಂಕ್ ಕುಡಿದಿದ್ದ. ಹಾಗಾಗಿ ಅವನು ಇನ್ನೂ ಕಳ್ಳ ಸಿಕ್ಕಿಲ್ಲವೆಂದ. ಸಾಧಾರಣ ಬಿಸ್ಕೆಟ್ ಕಳ್ಳನನ್ನು ಕೂಡ ಹಿಡಿಯುವುದು ಸಾಧ್ಯವಿಲ್ಲವೆ ಎಂದು ನಿತ್ಯಾ ಕೆಂಡವಾದಳು. ಮ್ಯಾನೇಜರಿಗೆ ಹೇಳಿ ಅಡ್ಮಿನ್ ವಿಭಾಗದವರಿಗೆ ಬಿಸಿ ಮುಟ್ಟಿಸಬೇಕೆಂದುಕೊಂಡಳು. ಕರೆ ಮುಗಿಸಿದವಳೇ ಗಟ್ಟಿ ನಿರ್ಧಾರದೊಂದಿಗೆ ಕುರ್ಚಿಯಿಂದ ಎದ್ದಳು.

ಅವಳ ಮ್ಯಾನೇಜರಿಗೆ ಪ್ರತ್ಯೇಕ ಕೋಣೆಯೊಂದಿತ್ತು. ಅಲ್ಲಿದ್ದ ಕುರ್ಚಿಗೆ ತನ್ನ ಜ್ಯಾಕೆಟ್ ಹೊದಿಸಿ ಅವನು ಎಲ್ಲೋ ಹೋಗಿದ್ದ. ಬೇಕೆಂದಾಗ ಈ ಮನುಷ್ಯ ಸಿಗುವುದೂ ಇಲ್ಲ ಎಂದು ಶಾಪ ಹಾಕಿಕೊಳ್ಳುತ್ತಾ ನಿತ್ಯಾ ತನ್ನ ಡೆಸ್ಕಿನತ್ತ ನಡೆದಳು. ಆಗಾಗ ಮ್ಯಾನೇಜರ್ ಬಂದನೋ ಇಲ್ಲವೋ ಎಂದು ಕೋಣೆಯೊಳಗೆ ಇಣುಕಿ ವಾಪಾಸಾದಳು. ಒಮ್ಮೆ ಇಣುಕಿದಾಗ ಅವನು ಕುರ್ಚಿಗೆ ಹೊದಿಸಿದ್ದ ಜ್ಯಾಕೆಟ್ ಕೂಡ ಮಾಯವಾಗಿತ್ತು. ನಿತ್ಯಾಳ ಸಿಟ್ಟು ತಾರಕಕ್ಕೇರಿತು. ಎಲ್ಲವೂ ನಿಯಂತ್ರಣ ತಪ್ಪಿ ಹೋಗುತ್ತಿದೆ, ಇವರಿಗೆಲ್ಲ ಬುದ್ಧಿ ಕಲಿಸುವವರು ಯಾರೂ ಇಲ್ಲವೆ! ಕೂಡಲೆ ಮ್ಯಾನೇಜರನ ಮೊಬೈಲ್ ಫೋನಿಗೆ ಕರೆ ಹಚ್ಚಿದಳು.

“ಹಲೋ ನಿತ್ಯಾ. ಹೇಗಿದ್ದೀಯ?” ಎಂದು ನಕಲಿ ದೇಶಾವರಿ ಶೈಲಿಯಲ್ಲಿ ಹೇಳಿದ ಮ್ಯಾನೇಜರ್. ನಿತ್ಯಾ ಅದಕ್ಕೆ ಉತ್ತರಿಸುವ ಮನಸ್ಥಿತಿಯಲ್ಲಿರಲಿಲ್ಲ.

“ಏನಾಗ್ತಿದೆ ಈ ಆಫೀಸಲ್ಲಿ?” ಎಂದು ಗರ್ಜಿಸಿದಳು. ಒಂದೇ ಉಸಿರಿನಲ್ಲಿ ಬಿಸ್ಕೆಟ್ ಮತ್ತು ಡಿಯೋಡರೆಂಟ್ ಬಾಟಲಿ ಕದ್ದು ಹೋಗಿದ್ದರ ಬಗ್ಗೆ ಹಾಗೂ ಅಡ್ಮಿನ್ ವಿಭಾಗದವರು ಎರಡು ದಿನದಿಂದ ಏನೂ ಮಾಡದೆ ಸಮಯ ತಳ್ಳುತ್ತಿರುವ ಬಗ್ಗೆ ಸಿಟ್ಟಲ್ಲಿ ವಿವರಿಸಿದಳು. ಹೀಗೆಲ್ಲ ಆಗುವುದಾದರೆ ಆಫೀಸಿಗೆ ಯಾವ ಧೈರ್ಯದಲ್ಲಿ ಬರುವುದು ಎಂದೆಲ್ಲ ಸೇರಿಸಿದಳು.

ಮ್ಯಾನೇಜರ್ ಹರಿಹರನಿಗೆ ಕರೆ ಹಚ್ಚಿ ವಿಚಾರಿಸಿದ. ವಿಷಯ ತಾನಂದುಕೊಂಡದ್ದಕ್ಕಿಂತ ಮೇಲಿನವರಿಗೆ ಮುಟ್ಟಿ ವಿಪರೀತಕ್ಕೆ ಹೋಗಲಿದೆಯೆಂಬ ಸುಳಿವು ಸಿಕ್ಕಿದಾಗ ಹರಿಹರನ ಘನ ವಿಚಾರಗಳೆಲ್ಲ ಅವನ ತಲೆಯಿಂದ ಪರಾರಿಯಾದವು. ಕೂಡಲೆ ಸಿದ್ರಾಮನನ್ನು ಕರೆದು ಮನೆಗೆ ಕಳಿಸಿದ. ಮಾತಾಡುವಾಗ ಅವನ ಕಣ್ಣು ನೋಡಲು ಮಾತ್ರ ಹರಿಹರನಿಗೆ ಸಾಧ್ಯವಾಗಲಿಲ್ಲ. ಆದರೆ ಮನೆಗೆ ಕಳಿಸಿಯೇ ಕಳಿಸಿದ.

***

ನಿತ್ಯಾ ಗಂಡನಿಗೆ ಇದನ್ನೆಲ್ಲ ಹೇಳಲು ಉತ್ಸುಕಳಾಗಿದ್ದಳು. ಮನೆ ತಲುಪಿದಾಗ ಮಗಳು ಮಲಗಿಯಾಗಿತ್ತು. ಮಾತಾಡಲು ಸರಿಯಾದ ಸಮಯವೆಂದು ಮುಖ ತೊಳೆದುಕೊಂಡು ಬಂದವಳೇ ಸೋಫಾದಲ್ಲಿ ಗಂಡನ ಪಕ್ಕ ಕುಳಿತು, “ಇವತ್ತು ಏನಾಯ್ತು ಗೊತ್ತಾ, ಪ್ರಶಾಂತ್?” ಎಂದು ಪೀಠಿಕೆ ಹಾಕಿದಳು.

ಪ್ರಶಾಂತ ಅವನ ಹೆಸರಿಗೆ ಅಪವಾದದಂತಿದ್ದ. ಅವನು ಪ್ರಶಾಂತವಾಗಿದ್ದದ್ದೇ ಕಡಿಮೆ. ಇವತ್ತೂ ಅಷ್ಟೆ. ಬೇಗನೆ ಹೇಳಿ ಮುಗಿಸು ಎಂಬಂತೆ ಪತ್ನಿಯ ಮುಖ ನೋಡಿದ.

ನಿತ್ಯಾ ಎಲ್ಲವನ್ನೂ ವಿವರಿಸದಳು. ಪ್ರಪಂಚ ಬದಲಿಸುವ ತನ್ನ ಯೋಜನೆಯ ಮೊದಲ ಹೆಜ್ಜೆಯಂತಿದ್ದ ಈ ಘಟನೆಯನ್ನು ಅವಳು ಉತ್ಸಾಹದಿಂದ ವರ್ಣಿಸಿದಳು. ಪ್ರಶಾಂತ ಎಲ್ಲವನ್ನೂ ಕೇಳಿಸಿಕೊಂಡ. ಅವಳ ಉತ್ಸಾಹವೇ ಅವನಿಗೆ ರೇಜಿಗೆ ಹುಟ್ಟಿಸುತ್ತಿತ್ತು. ಅವಳಿಗೆ ಏನಾದರೂ ಚುಚ್ಚಬೇಕೆಂದು ಅವನು ನಿರ್ಧರಿಸಿದ. ನಿರ್ಧರಿಸಿದ ಎರಡೇ ಕ್ಷಣದಲ್ಲಿ ಅವನಿಗೆ ವಿಷಯವೂ ಸಿಕ್ಕಿತು. ಅವಳು ಮಾತು ಮುಗಿಸುವುದನ್ನೇ ಕಾಯುತ್ತಾ ಕೂತ.

ಅವಳು ಮಾತು ಮುಗಿಸಿದ ಕೂಡಲೆ, “ಏನೋ ಸಾಧಿಸಿದ ಹಾಗೆ ಹೇಳ್ತಿದ್ದೀಯಲ್ಲ, ನಿಮ್ ಕಂಪನಿಗೆ ಈ ವರ್ಷ ತುಂಬಾ ಲಾಭ ಬಂದಿದ್ದು ಯಾವ ಪ್ರಾಜೆಕ್ಟಲ್ಲಿ ಹೇಳು?” ಎಂದು ಕೇಳಿದ.

“ಡೇಟಾ ಅನಾಲೆಟಿಕ್ಸ್ ಪ್ರಾಜೆಕ್ಟ್” — ನಿತ್ಯಾ ಹೇಳಿದಳು.

“ಏನದು?” — ನಿತ್ಯಾಳ ಬಾಯಿಯಿಂದಲೇ ಉತ್ತರ ಬರಿಸಲು ಪ್ರಶಾಂತ ಯತ್ನಿಸುತ್ತಿದ್ದ. ಅದು ನಿತ್ಯಾಳಿಗೆ ಅರ್ಥವಾಯಿತು.

“ಹೌದು, ಇಂಟರ್ನೆಟ್ಟಲ್ಲಿ ಜನ್ರು ತಮ್ ಬಗ್ಗೆ ಹಾಕಿರೋ ಇನ್ಫಾರ್ಮೇಷನ್ ಎಲ್ಲ ತೆಗೊಂಡು ಉಪ್ಯೋಗಿಸ್ತೀವಿ. ಸೋ, ಏನು ನೀನು ಹೇಳ್ತಿರೋದು? ನಾವು ಅದನ್ನೆಲ್ಲ ಕದೀತಿದ್ದೀವಿ ಅಂತನಾ?” ಎಂದು ಪ್ರಶಾಂತನ ಯೋಚನಾಸರಣಿಯನ್ನು ನಂಬಲಾರದವಳಂತೆ ನಿತ್ಯಾ ಕೇಳಿದಳು.

“ಅಷ್ಟೇ ಅಲ್ಲ. ನಿಮ್ಮ ಕಳ್ಳತನದಿಂದಲೇ ಪ್ರಪಂಚಕ್ಕೆ ಜಾಸ್ತಿ ಸಮಸ್ಯೆ. ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ, ಪೊಲಿಟಿಕಲ್ ಪಾರ್ಟಿಗಳಿಗೆ ಜನ್ರನ್ನ ಮ್ಯಾನಿಪುಲೇಟ್ ಮಾಡೋದು ಸುಲಭ ಆಗುತ್ತೆ. ನೀನೇ ಯೋಚ್ನೆ ಮಾಡು, ಅಲ್ಲೋಲ ಕಲ್ಲೋಲ ಆಗ್ಬಹುದು”. ಇಷ್ಟು ಹೇಳಿ ತಾನು ವಾದದಲ್ಲಿ ಈಗಾಗಲೇ ಗೆದ್ದಿರುವವನಂತೆ ಮುಗುಳ್ನಗುತ್ತಾ, ನಿತ್ಯಾಳ ಉತ್ಸಾಹದ ಬಲೂನಿಗೆ ಪಿನ್ ಚುಚ್ಚಿದ ಖುಷಿಯನ್ನು ಅನುಭವಿಸುತ್ತಾ ಕುಳಿತ.

“ಯೂ ಆರ್ ಇಂಪಾಸಿಬಲ್!” ಎಂದು ಉದ್ಗರಿಸಿದ ನಿತ್ಯಾ ಸ್ವಲ್ಪ ಹೊತ್ತಿನ ನಂತರ ಅವನ ಮೊಂಡುವಾದದಲ್ಲೂ ಸತ್ಯದ ಎಳೆ ಕಂಡು “ಶ್ರೀಹರಿ! ಶ್ರೀಹರಿ!” ಎಂದಳು.

ಪ್ರಪಂಚದಲ್ಲಿ ಸಾವಿರ ಸಮಸ್ಯೆ ಇದ್ದರೂ ನನ್ನ ಸರಿ–ತಪ್ಪಿನ ದೊಣ್ಣೆಗೆ ಸಿಕ್ಕಿದ್ದು ಒಬ್ಬ ಅಸಹಾಯಕ ಬಿಸ್ಕೆಟ್ ಕಳ್ಳ. ಸರಿ–ತಪ್ಪಿನ ಬಗ್ಗೆ ಗಟ್ಟಿ ಅಭಿಪ್ರಾಯ ಇಟ್ಟುಕೊಂಡು ತಪ್ಪಿಗೆ ಶಿಕ್ಷೆ ಆಗಬೇಕೆಂದು ನಾನು ಶ್ರಮಿಸಿದರೆ ಅದಕ್ಕೆ ಬಲಿಯಾಗುವುದೂ ಏನಿದ್ದರೂ ನನಗಿಂತ ಬಲಹೀನರೇ ಹೊರತು ನನಗಿಂತ ಬಲಶಾಲಿಗಳಾಗಿರಲು ಸಾಧ್ಯವಿಲ್ಲ. ಎಷ್ಟೇ ಹೋರಾಡಿದರೂ ಮೇಲಿನವರು ಯಾರೂ ಬಗ್ಗುವುದಿಲ್ಲ. ನನ್ನ ಹೊಟ್ಟೆ ತುಂಬುತ್ತಿರುವುದು ಕೂಡ ನನ್ನ ಕಂಪನಿಯವರು ಮಾಡುತ್ತಿರುವ ಕಳ್ಳತನದಿಂದಾಗಿ. ಎಲ್ಲರೂ ಹೊಟ್ಟೆ ತುಂಬಿಸಿಕೊಳ್ಳಲಷ್ಟೆ ನೋಡುತ್ತಿದ್ದಾರೆ. ಕೆಲವರ ಹಸಿವು ಹೆಚ್ಚು. ಅಂಥವರ ಹಸಿವಿಗೆ ದೇಶಗಳೇ ನಾಶವಾಗಿಬಿಡಬಹುದು. ನಿತ್ಯಾಳಿಗೆ ಏನೇನೋ ಆಲೋಚನೆಗಳು ಬಂದವು.

ಆದರೂ ಅವನು ಡಿಯೋಡರೆಂಟ್ ಬಾಟಲಿ ಕದ್ದಿದ್ದು ತಪ್ಪೇ ತಾನೇ! ಏನೋ ಸಂಶಯ ಬಂದು ಎದ್ದು ಹೋಗಿ ವಾರ್ಡ್‌ರೋಬಿನಲ್ಲೆಲ್ಲ ಹುಡುಕಿದಳು. ಆಫೀಸಿನಿಂದ ತಂದು ಮನೆಯಲ್ಲಿಟ್ಟು ಮರೆತು ಅವನ ಮೇಲೆ ಆಪಾದನೆ ಹೊರಿಸಿದ್ದರೆ ಎಂಬ ಹೊಸ ಭಯ ಹುಟ್ಟಿತ್ತು. ಹುಡುಕುವಾಗ ಅದು ಸಿಗುವುದು ಬೇಡವೆಂದೇ ಶ್ರೀಹರಿಯಲ್ಲಿ ಪ್ರಾರ್ಥಿಸುತ್ತಿದ್ದಳು. ಶ್ರೀಹರಿ ಬೇರೆಯವರ ಪ್ರಾರ್ಥನೆಗಳನ್ನು ಕೇಳಿಸಿಕೊಳ್ಳುತ್ತಿದ್ದನೋ ಏನೋ, ಡಿಯೋಡರೆಂಟ್ ಬಾಟಲಿ ಸಿಕ್ಕಿಯೇ ಬಿಟ್ಟಿತು. ನಿತ್ಯಾಳಿಗೆ ತನ್ನನ್ನು ತಾನೇ ಸಮರ್ಥಿಸಿಕೊಳ್ಳಲು ಇದ್ದ ಒಂದು ಕಾರಣವೂ ಇಲ್ಲದಾಯಿತು. ಈ ವಿಷಾದದೊಂದಿಗೆ ಬದುಕಲು ತಯಾರಾಗತೊಡಗಿದಳು.

***

ನಿತ್ಯಾಳ ಒಂದೂವರೆ ವರ್ಷದ ಮಗಳು ತನಗೆ ಹಾಕಿದ ಹಾಗೆಯೇ ತನ್ನ ಗೊಂಬೆಗೂ ಸಾಕ್ಸ್ ಹಾಕಬೇಕೆಂದು ಒಮ್ಮೆ ಹಟ ಹಿಡಿದಳು. ತನಗೆ ಚಳಿಯಾಗುವ ಹಾಗೆಯೇ ಗೊಂಬೆಗೂ ಚಳಿಯಾಗುತ್ತದೆಂಬುದು ಅವಳ ವಾದ. ಆ ಕ್ಷಣದಲ್ಲಿ ನಿತ್ಯಾಳಿಗೆ ಮಾನವೀಯತೆಯ ಬಗ್ಗೆ ಕೆಲವು ಘನ ವಿಚಾರಗಳು ಹೊಳೆದವು.

ಮರುದಿನ ಆಫೀಸಿನಲ್ಲಿ ಕಣ್ಣಿಗೆ ಕಂಡ ಕೆಲಸಗಾರರಿಗೆಲ್ಲ ಅವಳು ಬಿಸ್ಕೆಟ್ ಪೊಟ್ಟಣ ಹಂಚಿದಳು. ಪ್ರಪಂಚ ಬದಲಿಸುವತ್ತ ತನ್ನ ಪುಟ್ಟ ಹೆಜ್ಜೆಯೆಂದು ಹೆಮ್ಮೆ ಪಟ್ಟಳು. ಅಪರಾಧಿ ಪ್ರಜ್ಞೆ ಸ್ವಲ್ಪ ಕಡಿಮೆಯಾಯಿತು.

***

ಸಿದ್ರಾಮ ಹೊಸ ಕೆಲಸದ ಅನ್ವೇಷಣೆಯ ಯತ್ನದ ಭಾಗವಾಗಿ ಯಾರದೋ ಮುಂದೆ ವಿನಯದಿಂದ ಬಾಗಿ ಪ್ರಶ್ನಾರ್ಥಕ ಚಿಹ್ನೆಯಂತೆ ನಿಂತ.

**ಪ್ರತಿಕ್ರಿಯಿಸಿ: feedback@sudha.co.in**